ತಾರೀಖು 15ನೇ ಜನವರಿ 1889.

ನಂ. 176.—ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಮೆ|| ಪಿ. ಆರ್. ಕೃಷ್ಣಮೂರ್ತಿಯವರು, 1888ನೇ ಇಸವಿ ಡಿಸಂಬರ್ 11ನೇ ಮರುಂ ಲಾಗಾಯತು 5 ದಿವಸಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತಾರೆ.

ತಾರೀಖು 16ನೇ ಜನವರಿ 1889.

ನಂ. 177.—ಷೇಕ್ ಮದಾರ್ ಯಂಬವರಿಗೆ, 1888ನೇ ಇಸವಿ ಡಿಸಂಬರ್ 17ನೇ ಮರ್ತುಂ ಲಾಗಾಯತು 6 ತಿಂಗಳ ಪರಿಯಂತ ಅಜಮಾಯಿಷಿ ತರೀಕ್ 2ನೇ ಗ್ರೇಡ್ ಆಸ್ಪಟಲ್ ಅಸಿಸ್ಟೆಂಟ್ ಕೆಲಸ ಮೊಕರರ್ರಾಜಲ್ಪಟ್ಟಿರುತ್ತೆ.

ನಂ. 178.—ಮೆ|| ಆರ್. ಚೆಲುವಯ್ಯಂಗಾರ್ರು, ಹಾಸನ ಡಿಸ್ಟ್ರಿಕ್ಟು ಜನರಲ್ ಆ|| ಕಮಿಷನರ ಆಫೀಸ್ ಚಾರ್ಜನ್ನು ಮಾಜೇ ಮಜಕೂರ್ 8ನೇ ಮರ್ತುಮಿನ ಮಧ್ಯಾನ್ಹಾತ್ಪರ ಮೆ|| ಬಿ. ಜಿ. ಕೃಷ್ಣಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ತಾರೀಖು 17ನೇ ಜನವರಿ 1889.

ನಂ. 180.—ಮೆ|| ಆರ್. ನರಸಿಹ್ಮಯ್ಯಂಗಾರ್ರು, ಚಿತ್ರದುರ್ಗದ ಡಿಸ್ಟ್ರಿಕ್ಟು ಪೊಲೀಸ್ ಆಫೀಸ್ ಚಾರ್ಜನ್ನು ಮಾಜೆ ಮಜಕೂರ್ 3ನೇ ಮರ್ತುಮಿನ ಮಧ್ಯಾನ್ಹಾತ್ಪರ ಮೆ|| ನಾರಣಯ್ಯಂಗಾರ್ರಿಗೆ ಒಪ್ಪಿಸಿರುತ್ತಾರೆ.

ತಾರೀಖು 21ನೇ ಡಿಸಂಬರ್ 1888.

ಕಾರ್ಯಾರ್ಥ ದಿವಾನರವರನ್ನು ಭೇಟಿ ಮಾಡುವದಕ್ಕೆ ಆಪೇಕ್ಷಿಸುವ ದೊಡ್ಡಮನುಷ್ಯರು ಶುಕ್ರವಾರಗಳಲ್ಲಿ ಮಧ್ಯಾನ್ಹಾತ್ಪರ 2 ಘಂಟೆಗೆ ಕಛೇರಿಗೆ ಬರತಕ್ಕದ್ದು. ಈ ಬಗ್ಯಾಗಿ ಹಿಂದಿನ ದಿನ ಚೀಫ್ ಸೆಕ್ರಿಟರಿಯವರಿಗೆ ತಮ್ಮ ಕಾರ್ಡಿಗಳನ್ನು ಕಳುಹಿಸತಕ್ಕದ್ದು.

2. ಬೆಂಗಳೂರು ಆಫೀನಲ್ಲಿ ಯಿಡಲ್ಪಟ್ಟಿರುವ ಅರ್ಜೀಪೆಟ್ಟಿಗೆಯು ದಿನವಹಿ ಚೀಫ್ ಸೆಕ್ರಿಟರಿಯವರಿಂದ, ಅವರು ಬಂಗಳೂರಲ್ಲಿ ಯಿಲ್ಲದ ಕಾಲದಲ್ಲಿ ಅಂಡರ್ ಸೆಕ್ರಿಟರಿಯವರಿಂದಲೂ ಮಧ್ಯಾನ್ಹ 12 ಘಂಟೆಗೆ ತೆಗಿಯಲ್ಪಟ್ಟು ಅದರಲ್ಲಿನ ಅರ್ಜಿಗಳು ತೆಗೆದುಕೊಳ್ಳಲ್ಪಡುವದು;

3. ಅರ್ಜೀದಾರರುಗಳು ಶುಕ್ರವಾರ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಕಛೇರಿಯಲ್ಲಿ ಕೇಳಲ್ಪಡುವರು.

ಬಮೋಜೀಬ್ ಹುಕ್ತುಂ.
ಆರ್. ವಿಜಯಿಾಂಧ್ರರಾವ್,
ಚೀಫ್ ಸೆಕ್ರಿಟರಿ.

ದಿವಾನರವರು, ಅವರ ಭೇಟಿಮಾಡಲಿಚ್ಛೆಯುಳ್ಳ ದೊಡ್ಡಮನುಷ್ಯರುಗಳನ್ನು ಪ್ರತಿ ಶನಿವಾರ ದಿವಸ ಮಧ್ಯಾನ್ಹ 12 ಘಂಟೆ ಲಾಗಾಯತು 2 ಘಂಟೆ ಪರಿಯಂತ ತಮ್ಮ ವಾಸಸ್ಥಾನದಲ್ಲಿ ಬರಮಾಡಿಕೊಳ್ಳುವರು.

ನೋಟಿಸ್ ದೊಡ್ಡಮನುಷ್ಯರುಗಳು ಅವರಿಗೆ ಯಿಷ್ಟವಿರುವ ಪಕ್ಷಕ್ಕೆ ಅದೇ ದಿವಸ ಮಧ್ಯಾನ್ಹಾತ್ಪರ 3 ಘಂಟೆಗೆ ಬರಬಹುದು.

ಹುಕ್ತುಂ ಬಮೋಜೀಬ್,
ಕೆ. ದೊರಸಾಮಿಅಯ್ಯರ್,
ಪ್ರೈವೇಟ್ ಸೆಕ್ರಿಟರಿ.

ವಿದ್ಯಾಭ್ಯಾಸದ ಇಲಾಖೆ.

1888ನೇ ಇಸವಿ ಡಿಸಂಬರ್ ತಾರೀಖು 29.

ಮೈಸೂರು ದೇಶೀಪರೀಕ್ಷೆ.

ಸ್ಯ 1889ನೇ ಇಸವಿ ಫೆಬ್ರವರಿ ತಿಂಗಳಲ್ಲಿ ನಡೆಯುವ ಮೈಸೂರು ದೇಶೀ ವಿದ್ಯಾರ್ಥಿಗಳ ಪರೀಕ್ಷೆಯಲ್ಲಿ ಮೇಲ್ಕ್ರೋಟೆ ಗೌ|| ಕ|| ಸ್ಕೂಲ್ ವಿದ್ಯಾರ್ಥಿಗಳ ಪೈಕಿ ಅಧಿಕವಾದ ನಂಬರುಗಳನ್ನ ಪಡೆದು ತೇರ್ಗಡೆ ಹೊಂದುವಂಥವನಿಗೆ, ಜನ್ನರಾಯಪಟ್ಟಣದ ಅಂಜಿ ಮುತ್ಸದೀ ಮ್ಮ|| ರಾ|| ಕೃಷ್ಣಯ್ಯನವರಿಂದ 6 ರೂಪಾಯಿ ಬೆಲೆಯುಳ್ಳ ಬಂದು ಬೆಳ್ಳಿ ಬಟ್ಟು ಬಹುಮಾನವಾಗಿ ಕೊಡಲ್ಪಡುವದು.

ತಾರೀಖು 17ನೇ ಜನವರಿ 1889ನೇ ಇಸವಿ.

ಮೈಸೂರು ದೇಶೀಯಭ್ಯೆ ಪರೀಕ್ಷೆ.

ಮೈಸೂರು ದೇಶೀ ಪರೀಕ್ಷೆಯು ಪ್ರತಿ ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರ್ಸ್ ಅಂದರೆ ಪ್ರಮುಖ ಸ್ಥಳದ ಸರ್ಕಾರೀ ಕಾಲೀಜ್ ಅಥವಾ ಹೈ ಸ್ಕೂಲಿನಲ್ಲಿಯೂ ಮತ್ತು ಒಂದು ವಿಕೇಷ ಸಂದರ್ಭದಿಂದ ಕಡೂರು ಡಿಸ್ಟ್ರಿಕ್ಟು ಯಿಡಿಪಳ್ಳಿಯಲ್ಲಿಯೂ ನಡೆಸಲ್ಪಡುವದು,ಸದರೀ ಪರೀಕ್ಷೆಯು ಸ್ಯ 1889ನೇ ಇಸವಿ ಫಿಬ್ರವರಿ 18ನೇ ಸೋಮವಾರದ ದಿವಸ ಆರಂಭಿಸುತ್ತದೆ. ಪರೀಕ್ಷೆಯು ಇವರಿಂದಕಂಡ ಕಾಲಕ್ರಮವಾಗಿ ನಡಿಸಲ್ಪಡುವದು.

	ವಿದ್ಯಾರ್ಥಿಗಳ ಪರೀಕ್ಷೆ.		ಉಪಾಧ್ಯಾಯರ ಪರೀಕ್ಷೆ.	
ದಿವಸ.	ಘಂಟೆ.	ಅಂಕಗಳು.	ಘಂಟೆ.	ಅಂಕಗಳು.
ಮೊದಲನೇ ದಿವಸ.	10ರಿಂದ 1ರ ವರಿಗೆ.	ಭಾಷಾ ಗ್ರಂಥ, ವ್ಯಾಕರಣ (ಆವಶ್ಯಕ ಭಾಷೆ.)	10ರಿಂದ 1ರ ವರಿಗೆ	ಪದ್ಯಕಾವ್ಯ ವಾಕ್ಯವಿಭಜನೆ.
	2 „ 5 „	ಡಿಟೋ ಡಿಟೋ (ಎರಡನೇ ಭಾಷೆ.)	2 „ 4 „ 4 „ 5 „	ವ್ಯಾಕರಣ. ವಾಕ್ಯರಚನೆ.
ಎರಡನೇ ದಿವಸ.	10ರಿಂದ 11ರ ವರಿಗೆ.	ಬರವಣಿಗೆ ಅಕ್ಷರ ಸಂಯೋಜನ (ಆವಶ್ಯಕ ಭಾಷೆ.)	10ರಿಂದ1ರವರಿಗೆ.	ಚರಿತ್ರೆ.
	11 „ 1 „ 2 „ 5 „	ಚರಿತ್ರೆ. ಭೂಗೋಳ. ಭೂಪಠನಪ್ಲೆಬರಿಯುವಿಕೆ.	2 „ 4 „	ರೇಖಾಗಣಿತ.
ಮೂರನೇ ದಿವಸ.	10ರಿಂದ 12ರ ವರಿಗೆ. 12ರಿಂದ 1 „	ಅಂಕಗಣಿತ. ಬರವಣಿಗೆ ಅಕ್ಷರಸಂಯೋಜನ (ಎರಡನೇ ಭಾಷೆ.)	10ರಿಂದ 1ರವರಿಗೆ. 2 „ 4 „	ಅಂಕಗಣಿತ. ಬೀಜಗಣಿತ.
	2 „ 3. 30 3. 30. 5 „	ವೈದ್ಯನಾಯಭೋಧಿನಿ. ಆರೋಗ್ಯಭೋಧಿನಿ.		
ನಾಲ್ಕನೇ ದಿವಸ.	10ರಿಂದ11-30ವರಿಗೆ 11. 30 „ 1 2. 3. 30 3.30 5	ಕ್ಷೇತ್ರಗಣಿತ. ಭಾಷಾಂತರ. ಹೊಲಿಗೆ. ಪಾಕಶಾಸ್ತ್ರ.	10ರಿಂದ 1ರವರಿಗೆ. 2 „ 5 „	ಭೂಗೋಳ. ಶಾಸ್ತ್ರಪಾಠ.
ಐದನೇ ದಿವಸ.	...	..	10ರಿಂದ1ರವರಿಗೆ.	ಪಾಠಶಾಲೆಯನ್ನು ನಡಿಸುವ ಕ್ರಮ.

ಇದರಡಿ ನಮೂದಿಸಲ್ಪಟ್ಟ ಅಂಕಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು.

1. ಪರೀಕ್ಷೆಯು ಆರಂಭಿಸುವದಕ್ಕೆ ಕ್ಲುಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವವರಿಗೂ ಪರೀಕ್ಷೆಯಾಗುವ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲ ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

2. ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷೆ ಕೊಠಡಿಯನ್ನು ಬಂದಾವರ್ತಿ ಬಿಟ್ಟುಬಂದ ಅನಂತರ ಪುನಃ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಮುಂಟಾಗಲಾರದು, ಅಲ್ಲದೆ ತನ್ನ ಮುತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟು ವಿನಹ ಪರೀಕ್ಷೆ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

3. ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೇ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರಿ ಸಂಗತಿಯು ಡೈರೆಕ್ಟರ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

4. ಪರೀಕ್ಷೆ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ ರೂಲರುಗಳನ್ನಾಗಲಿ ಪುಸ್ತಕಗಳನ್ನಾಗಲಿ ಬರದ ಕಾಗದಗಳನ್ನಾಗಲಿ ಅಥವಾ ಇನ್ಯಾವ ವಿಧವಾದ ಕಾಗದಪತ್ರವನ್ನಾಗಲಿ ತೆಗದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವಲ್ಲಿಯಾಗಲಿ, ಅಥವಾ ಇನ್ಯಾವ ಅಕೃತ್ಯಗಳನ್ನು ನಡಿಸುತ್ತಿರುವಲ್ಲಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರಿ ನಡವಳಿಕೆಯು ಡೈರೆಕ್ಟರ ಸಾಹೆಬರವರಿಗೆ ರಿಪೋರ್ಟು ಮಾಡಲ್ಪಡುವದು.

5. ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್‌ಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವವರಿಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡಿಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

6. ವಿದ್ಯಾರ್ಥಿಯು ಹೆಸರು ರೆಜಿಸ್ಟರ ನಂಬರ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

7. ಪ್ರಶ್ನಾ ಕಾಗದಗಳು ಕೆಮಾಯಿ ಯಾವ ಕಾಗದಗಳನ್ನಾಗಲಿ ಪರೀಕ್ಷೆ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡಲ್ಪಡುವದಿಲ್ಲ.

8. ವಿದ್ಯಾರ್ಥಿಗಳು ಕಾಗದಗಳನ್ನು ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. "ವಿಷ್ಪ್ ಕೆಟ್ಟುಹೋದ ಕಾಗದ ವಗ್ಗೆರೆಗಳು" ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನ ಮೇಲೆಯೇ ಬಿಡಲ್ಪಡಬೇಕು

ಎಲ್. ರೈಸ್,
ಎಜ್ಯುಕೇಷನ್ ಸೆಕ್ರಟರಿ.

ಪಬ್ಲಿಕ್ ವರ್ಕ್ಸ್ ಇಲಾಖೆ.

ಇನ್ಸ್ಟ್ರುಮೆಂಟ್‌ಗಳು.

ನಂ. 184—48. ತಾರೀಖು 11ನೇ ಜನವರಿ 1889.

ಸ್ಪೆಷಲ್ ಇಂಪ್ರೂವ್‌ಮೆಂಟ್ ಡಿವಿಜ್ ಸ್ಯಾನಿಟರಿ ಇಂಜನೀರ್ ಮೇ|| ಸ್ಟ್ರ್ಯಾಂಡಿಷ್‌ಲೀಯವರಿಗೆ 1889ನೇ ಇಸವಿ ಫಿಬ್ರವರಿ ಗುರ್ತೇ ಲಾಗಾಯತು ಯಾ ಅವರು ಹೊರಟು ಹೋಗುವ ತಾರೀಖು ಲಾಗಾಯತು 3 ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇ|| ಸ್ಟ್ರ್ಯಾಂಡಿಷ್‌ಲೀಯವರು ರಜಾದ ಮೇಲೆ ಇರುವ ಪರ್ಯಂತ, ಹಂಗಾಮಿ ತರೀಕ್ ಅಪ್ಪಗ್ರಾಂ ನಾಲಾ ಡಿವಿಜನಿನ ಎಗ್ಜಿಕ್ಯೂಟಿವ್ ಇಂಜನೀರು ತಮ್ಮ ಕೆಲಸಗಳೊಂದಿಗೆ ಸದರೀ ಡಿವಿಜನಿನ ಚಾರ್ಜನ್ನು ವಹಿಸಿರತಕ್ಕದ್ದು.

ನಂ. 275—58. ತಾರೀಖು 17ನೇ ಜನವರಿ 1889.

ಸ್ಪೆಷಿಯಲ್ ಇಂಪ್ರೂವ್‌ಮೆಂಟ್ ಡಿವಿಜ್ ಅಸ್ಸಿಟಲ್ ಇಂಜನೀರ್ ಮೇ|| ಟಿ. ವಿ. ನಾರಿಸ್, ಬಿ. ಕೆ. ಇ. ಯವರು, ಅವರಿಗೆ 1888ನೇ ಇಸವಿ ಅಕ್ಟೋಬರ್ 10ನೇ ನಮ್ಬರ್ಕಂ 5038—851ನೇ ನಂಬರಿನ ಇನ್ಸ್ಟ್ರುಮೆಂಟಿನಲ್ಲಿ ಕೊಟ್ಟಿದ್ದ ಪ್ರಿವಿಲೀಜ್ ರಜಾದಿಂದ ಪುನಶ್ಚ ಕೆಲಸದ ಮೇಲೆ ಬಂದಿರುತ್ತಾರಾಗಿ, 1889ನೇ ಇಸವಿ ಜನವರಿ 14ರ ಲಾಗಾಯತು ಫಿಬ್ರವರಿ 9ನೇ ತಾರೀಖು ವರಿಗೂ ಬಾಕೀಲಿರುವ ಉಪಯೋಗಿಸಿಕೊಳ್ಳದ ರಜಾವನ್ನು ಇದರ ದೆಸೆಯಿಂದ ರದ್ದುಪಡಿಸಿರುತ್ತೆ.

ನಂ. 290—61. ತಾರೀಖು 17ನೇ ಜನವರಿ 1889.

2ನೇ ಗ್ರೇಡ್ ಓವರ್‌ಸೀರ್ ಮೇ|| ಜೆ. ಪಿ. ಜೇಕಬ್ಸ್‌ಯವರಿಗೆ 1889ನೇ ಇಸವಿ ಜನವರಿ ಗುರ್ತೇ ಲಾಗಾಯತು 3ನೇ ಗ್ರೇಡ್ ಓವರ್‌ಸೀಯರ್ ಕೆಲಸಕ್ಕೆ ಕಂಫರಂ ದಾಖಲ್ಮಾಡಲ್ಪಟ್ಟಿರುತ್ತೆ.

ನಂ. 293—64. ತಾರೀಖು 17ನೇ ಜನವರಿ 1889.

2ನೇ ಗ್ರೇಡ್ ಓವರ್‌ಸೀರ್ ಕೆ. ಪ್ಯಾಷೇರಾಯರಿಗೆ, ಮಾಹೆ ಮಜಕೂರ್ ಗುರ್ತೇ ಲಾಗಾಯತು 1ನೇ ಗ್ರೇಡ್ ಸಬ್ ಓವರ್‌ಸೀರ್ ಕೆಲಸಕ್ಕೆ ಕಂಫರಂ ದಾಖಲ್ಮಾಡಲ್ಪಟ್ಟಿರುತ್ತೆ.

ಸಿ. ಹೆಚ್. ಎಂ. ಕೆಂಪಿಂಗ್‌ಟನ್, ಮೇಜರ್ ಆರ್. ಇ.
ಅಸಿಸ್ಟೆಂಟ್ ಸೆಕ್ರಟೀರಿ ಮೈ. ಪ. ಇ.

ಲೆಜಿಸ್ಲೇಟಿವ್ ಇಲಾಖೆ.

ತಾರೀಖು 19ನೇ ಡಿಸೆಂಬರ 1888.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಲ್ಯಾಂಡ್ ರೆವಿನ್ಯೂ ಕೋಡಿಂಬ 1888ನೇ ಇಸವಿ IVನೇ ನಂಬರ್ ರಗ್ಯುಲೇಷನಿನ ಇಂಗ್ಲಿಷ್ ಮತ್ತು ಕನ್ನಡ ಪ್ರತಿಗಳು ಪ್ರತಿ 1ಕ್ಕೆ ಎಂದು ರೂಪಾಯಿ ಪ್ರಕಾರ ಬೆಂಗಳೂರಲ್ಲಿರತಕ್ಕ ಗವರ್ನಮೆಂಟ್ ಬುಕ್ಕು ಡಿಪೋದಲ್ಲಿ ಖರೀದಿಗೆ ದೊರೆಯುವವು.

ಯಸ್. ವೆಂಕಟವರದಯ್ಯಂಗಾರ್,
ಲೆಜಿಸ್ಲೇಟಿವ್ ಸೆಕ್ರಟರಿ.